**ದಿನಾಂಕಃ4-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ-ಪ್ರತಿವಾದಿಯ ಪರ ಶ್ರೀ. ಎಂ. ಆರ್. ಆರ್ , ವಕೀಲರಿಂದ:-**

1. ನಾನು ಎಸ್. ಎಸ್. ಎಲ್. ಸಿ ಅನುತ್ತೀರ್ಣನಾಗಿರುತ್ತೇನೆ. ನನಗೆ ಈಗ 57 ವರ್ಷ ವಯಸ್ಸಾಗಿದೆ. ನಾನು ವೃತ್ತಿಯಲ್ಲಿ ವ್ಯವಸಾಯವನ್ನು ಮಾಡುತ್ತೇನೆ. ನಾನು ನೇತೇನಹಳ್ಳಿ ಗ್ರಾಮದಲ್ಲಿ ವ್ಯವಸಾಯವನ್ನು ಮಾಡುತ್ತೇನೆ. ನಾನು 2005 ನೇ ಇಸವಿಯಲ್ಲಿ ಬೆಂಗಳೂರಿಗೆ ಕೆಲಸ ಮಾಡಲು ನೇತೇನಹಳ್ಳಿ ಗ್ರಾಮದಿಂದ ಓಡಾಡುತ್ತಿದ್ದೇನು. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ವಕೀಲರಾದ ರಂಗನಾಥಯ್ಯನವರು ಮಾಹಿತಿಯನ್ನು ನೀಡಿರುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನೇತೇನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದು, ಹಾಲಿ ಬೆಂಗಳೂರು ಕೃಷ್ಣ ಗಿರಿ ಹತ್ತಿರ ವಾಸಿಸುತ್ತಿದ್ದೇನೆ ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಬೆಂಗಳೂರಿನಲ್ಲಿ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದೇನು. 2005 ನೇ ಇಸವಿಯಿಂದ ನನ್ನ ಆಧಾರ ಕಾರ್ಡ್ ನೇತೇನಹಳ್ಳಿ ಗ್ರಾಮದ ವಿಳಾಸಕ್ಕೆ ಇದೆ. ಕೊರೋನಾ ಬಂದ ನಂತರ ನಾನು ಬೆಂಗಳೂರನ್ನು ಬಿಟ್ಟು ನನ್ನ ಗ್ರಾಮಕ್ಕೆ ಬಂದಿರುತ್ತೇನೆ.

2. ವಾದಿಯು ನನಗೆ 10 ರಿಂದ 12 ವರ್ಷಗಳಿಂದ ಪರಿಚಯವಿದ್ದಾರೆ. ಈ ದಾವೆಯಲ್ಲಿ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ಯಾವುದೇ ನೋಟಿಸ್ ಬಂದಿರುವುದಿಲ್ಲ. ಇಂದು ನ್ಯಾಯಾಲಯಕ್ಕೆ ವಾದಿಯೇ ನಿಮ್ಮನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ತನ್ನನ್ನು ನ್ಯಾಯಾಲಯಕ್ಕೆ ಬರುವಂತೆ ಹೇಳಿದರು ಎನ್ನುತ್ತಾರೆ. ವಾದಿಯು ನಿಮಗೆ ಹೇಗೆ ಪರಿಚಯವಾದರು ಎಂದರೆ ಸಾಕ್ಷಿಯು ತಾನು ವಾದಿಯ ಅಂಗಡಿಯ ಪಕ್ಕದಲ್ಲಿ ಬೀಡ ಅಂಗಡಿಯನ್ನು ಇಟ್ಟಿದ್ದೇನು ಮತ್ತು ಆಗ ಅವರ ಪರಿಚಯ ಆಗಿತ್ತು ಎನ್ನುತ್ತಾರೆ.

3. ನಿಮ್ಮನ್ನು ಪುಟ್ಟಣ್ಣ ಎಂದು ಸಹ ಕರೆಯುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ರಿಯಲ್ ಎಸ್ಟೇಟ್ ವ್ಯವಹಾರವನ್ನು ಎಂದಿಗೂ ಸಹ ಮಾಡಿರುವುದಿಲ್ಲ. ನಿಪಿ-1 ರಂತೆ ಸ್ವತ್ತನ್ನು ಖರೀದಿ ಮಾಡುವ ವಿಷಯಕ್ಕೆ ಸಂಬಂಧಿಸಿದ ವ್ಯವಹಾರದಲ್ಲಿ ನಾನು ಭಾಗಿ ಆಗಿರುವುದಿಲ್ಲ. ವಾದಿಗೆ ನಾನು ದಾವಾಸ್ವತ್ತನ್ನು ಕೊಡಿಸುತ್ತೇನೆ ಎಂದು ಕರೆದಿರುವುದಿಲ್ಲ. ನೀವು ವಾದಿಯ ಬಾರ್ ಎದುರು ಬೀಡ ಅಂಗಡಿ ಇಟ್ಟಿದ್ದ ಕಾರಣ ನಿಮಗೂ ಮತ್ತು ವಾದಿಗೂ ಒಳ್ಳೆಯ ವಿಶ್ವಾಸ ಇತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಶ್ವಾಸದ ಮೇರೆಗೆ ವಾದಿಯು ನಿಮ್ಮನ್ನು ವಕೀಲರಾದ ರಂಗಯ್ಯನವರ ಕಛೇರಿಗೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಕೊರೋನಾವು 2018-19 ನೇ ಇಸವಿಯಲ್ಲಿ ಬಂದಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಜೊತೆ ವಕೀಲರ ಕಛೇರಿಗೆ ಪಿ. ಡಬ್ಲೂ-3 ಮತ್ತು ರೇಣುಕಪ್ಪನವರು ಬಂದಿದ್ದರು. ಅವರಿಬ್ಬರನ್ನು ವಾದಿಯು ನಿಮ್ಮ ಜೊತೆಯಲ್ಲಿಯೇ ಕರೆದುಕೊಂಡು ಬಂದರು ಎಂದರೆ ಸಾಕ್ಷಿಯು ಅವರುಗಳು ಪ್ರತ್ಯೇಕವಾಗಿ ಬಂದರು ಎನ್ನುತ್ತಾರೆ.

4. ನಾನು ವಕೀಲರ ಕಛೇರಿಗೆ ಮಧ್ಯಾಹ್ನ ಸುಮಾರು 2 ರಿಂದ 2.30 ರ ಸಮಯದಲ್ಲಿ ಹೋಗಿರುತ್ತೇನೆ. ಆ ಸಮಯದಲ್ಲಿ ವಕೀಲರು, ವಾದಿ, ಪ್ರತಿವಾದಿ, ರವಿಶಂಕರ್ ಮತ್ತು ನಾನು ಸೇರಿ 3 ಜನ ಸಾಕ್ಷಿದಾರರು ಇದ್ದೇವು. ನನ್ನ ಸಮಕ್ಷಮದಲ್ಲಿ ಯಾವುದೇ ಮಾತುಕತೆ ಆಗಿರುವುದಿಲ್ಲ. ನಾನು ನಿಪಿ-1 ನ್ನು ನೋಡಿರುತ್ತೇನೆ. ನಿಪಿ-1 ಕ್ಕೆ ಮೊದಲು ನಾನು ಸಹಿಯನ್ನು ಮಾಡಿರುತ್ತೇನೆ, ನಾನು ಆದ ನಂತರ ರೇಣುಕಪ್ಪನವರು ಸಹಿಯನ್ನು ಮಾಡಿರುತ್ತಾರೆ. ನನ್ನನ್ನು ಹೊರತುಪಡಿಸಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-1 ಕ್ಕೆ ವಾದಿಯು 2 ರಿಂದ 3 ಕಡೆಯಲ್ಲಿ ಸಹಿಯನ್ನು ಮಾಡಿರುತಾರೆ. ವಾದಿಯು ಸಹಿ ಮಾಡಿರುವುದನ್ನು

ನಾನು ನೋಡಿರುತ್ತೇನೆ. ನಿಮ್ಮ ಸಮಕ್ಷಮದಲ್ಲಿ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1 ಕ್ಕೆ ನೀವು ಸಹಿಯನ್ನು ಮಾಡಿರುವುದನ್ನು ಹೊರತುಪಡಿಸಿ ನಿಮಗೆ ಬೇರೆ ಏನೂ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು 2009 ನೇ ಇಸವಿಯ 2 ನೇ ತಿಂಗಳಿನಲ್ಲಿ ನಿಪಿ-1 ಕ್ಕೆ ಸಹಿಯನ್ನು ಮಾಡಿರುತ್ತೇನೆ, ಆದರೆ ನನಗೆ ಯಾವ ದಿನಾಂಕದಂದು ಸಹಿಯನ್ನು ಮಾಡಿದ್ದೇನೆ ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ನೀವು ಈ ಮೇಲೆ ಹೇಳಿರುವ ದಿನಾಂಕನವನ್ನು ಹೇಗೆ ನೆನಪಿನಲ್ಲಿ ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಕಳೆದ ತಿಂಗಳು ವಾದಿಯು ತನಗೆ ಈ ದಾವೆಯಲ್ಲಿ ಸಾಕ್ಷಿ ಹೇಳುವಂತೆ ಹೇಳಿದಾಗ ತನಗೆ ವಾದಿಯು ದಿನಾಂಕವನ್ನು ಹೇಳಿದ್ದರು ಎನ್ನುತ್ತಾರೆ. ವಾದಿಯು ನಿಮಗೆ ಸದರಿ ದಿನಾಂಕವನ್ನು ತಿಳಿಸಿದ ಕಾರಣ ನೀವು ಇಂದು ಆ ದಿನಾಂಕವನ್ನು ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

5. ಈಗ ಸಾಕ್ಷಿಗೆ ನಿಪಿ-1 ಮತ್ತು ತನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ತೋರಿಸಿದ್ದು, ಅದರಲ್ಲಿ ಇರುವ ನಿಮ್ಮ ಸಹಿಗೆ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ಲೇಟ್ ದೊಡ್ಡ ನರಸಯ್ಯ, ನೇತೇನಹಳ್ಳಿಯನ್ನು ಯಾರು ಬರೆದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎನ್ನುತ್ತಾರೆ. ಪಿ. ಡಬ್ಲೂ-3 ಮತ್ತು 4 ರವರು ನನ್ನ ಸಮಕ್ಷಮದಲ್ಲಿ ನಿಪಿ-1 ಕ್ಕೆ ಸಹಿಯನ್ನು ಮಾಡಿದರು. ಅವರು ಯಾವ ಪೆನ್ನಿನಲ್ಲಿ ಸಹಿಯನ್ನು ಮಾಡಿದರು ಎಂದು ನನಗೆ ಗೊತ್ತಾಗಲಿಲ್ಲ. ಆದಾದ ನಂತರ ನಿಮಗೆ ಯಾರು ಸಹಿ ಮಾಡಿದ್ದರು ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಹೇಳುವ ಹಾಗೆ ನಿಪಿ-1 ನ್ನು ಮಾಡಿರುವುದಿಲ್ಲ ಮತ್ತು ನೀವು ಮತ್ತು ವಾದಿಯು ಒಳ್ಳೆಯ ವಿಶ್ವಾಸದಿಂದ ಇರುವ ಕಾರಣದಿಂದ ನಿಪಿ-1 ನ್ನು ಸೃಷ್ಟಿಸಿ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ

ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ಸಹಿಯು ನಿಮ್ಮದಾಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಪಟ್ಟಯ್ಯ ಡಿ. ಎನ್ ಎಂಬ ಹೆಸರು ಇರುವ ಕಾರಣದಿಂದ ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿಯು ಯಾವುದೇ ಕರಾರುಪತ್ರವನ್ನು ಮಾಡಿರುವುದಿಲ್ಲ ಮತ್ತು ಅವರ ಸಹಿಯನ್ನು ಸಹ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯು ಸಹಿಯನ್ನು ಹಾಕಿರುವ ಬಗ್ಗೆ ತನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ಪ್ರತಿವಾದಿಯ ಯಜಮಾನರು ಸಹಿ ಮಾಡಿರುವ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರತಿವಾದಿಗೆ ಸೇರಿರುವ ದಾವಾಸ್ವತ್ತನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ನೀವು ವಾದಿಯ ಜೊತೆ ಸೇರಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**